

# ಖೀರ್ ಗಂಗಾ ಹಿಮ ಕರಗಿ ಹಾಲಾಗಿ...

**ದಟ್ಟ ಕಾಡಿನ ನಡುವೆ ಹಾಲಿನಂತೆ ಹರಿವ 'ಖೀರ್ ಗಂಗಾ' ತನ್ನ ಸೌಂದರ್ಯ ಹಾಗೂ ಪೌರಾಣಿಕ ಹಿನ್ನೆಲೆಯಿಂದ ಚಾರಣಿಗರನ್ನು ಸೆಳೆಯುತ್ತಿರುವ ತಾಣ.**

■ ರಾಜು ಎಲ್.ಎಸ್.

ಚಾರಣಪ್ರಿಯರು 'ಖೀರ್ ಗಂಗಾ' ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವೆ? ನಾವಂತೂ 'ಖೀರ್ ಗಂಗಾ' ಅನುಭವಕ್ಕೆ ಒಡ್ಡಿಕೊಳ್ಳಲು ಕುತೂಹಲಿಗಳಾಗಿದ್ದೆವು. ಬೆಂಗಳೂರಿನಿಂದ ಚಂಡೀಗಢಕ್ಕೆ ವಿಮಾನ ಪ್ರಯಾಣ. ಅಲ್ಲಿಂದ ಕಾರಿನಲ್ಲಿ ಹಿಮಾಚಲ ಪ್ರದೇಶದ ಕಸೋಲ್ ತಲುಪಿ ಮರುದಿನ ಭರ್ಷೈನಿಯಿಂದ ಚಾರಣ ಶುರುಮಾಡಿದೆವು.

ನಮ್ಮ ಚಾರಣದ ದಿಕ್ಕು 'ಖೀರ್ ಗಂಗಾ'. ಮಾರ್ಗದರ್ಶಿಯನ್ನು ಅನುಸರಿಸಿ ಬೃಹದಾಕಾರದ ವೃಕ್ಷಗಳ ಕಾನನದ ಹಾದಿಯಲ್ಲಿ ಹೆಜ್ಜೆ ಹಾಕತೊಡಗಿದೆವು. ಕಾಲುದಾರಿಯಲ್ಲಿ ದೈತ್ಯ ಮರಗಳು ಮುರಿದುಬಿದ್ದಿದ್ದವು. ಅವನ್ನು ಹತ್ತಿ ನೆಗೆದು ದಾಟಿ ಮುನ್ನಡೆಯುತ್ತಾ ಸಾಗಿದೆವು.

ಆ ಜಾಗಕ್ಕೆ 'ಪಾರ್ವತಿ ವ್ಯಾಲಿ' ಎನ್ನುವ ಹೆಸರು. ಅದು ಜಗನ್ಮಾತೆ ಪಾರ್ವತಿಯ ತವರು ಮನೆಯಂತೆ. ನಡೆಯುವಾಗ ಪ್ರಪಾತದಲ್ಲಿ ಭೋರ್ಗರೆಯುವ ಪಾರ್ವತಿ ನದಿಯ ನೋಟ ಕಣ್ಮನ ಸೆಳೆಯುತ್ತದೆ. ಹಿಮ ಕರಗಿದ ನೀರು ಕಿರು ಜಲಪಾತಗಳನ್ನು ಸೃಷ್ಟಿಸಿ ಈ ನದಿಯನ್ನು ಸೇರುತ್ತದೆ. ನದಿಯ ಸೊಬಗಂತೂ ವರ್ಣಿಸಲಸದಳ.

ಚಾರಣ ಮಾಡಲು ಎರಡು ದಾರಿಗಳಿದ್ದವು: ಕಾಡಿನ ದಾರಿ ಮತ್ತು ಹಳ್ಳಿಯ ದಾರಿ. ನಾವು ಕಾಡಿನ ಕಠಿಣ ದಾರಿಯನ್ನು ಆಯ್ಕೆ ಮಾಡಿಕೊಂಡೆವು. ಚಾರಣದ ಹಾದಿಯಲ್ಲಿ ನಮ್ಮ ಮಾರ್ಗದರ್ಶಿ ಆ ಸ್ಥಳದ ಕಥೆಯನ್ನು ಹೇಳಲು ಶುರುಮಾಡಿದರು. ಒಮ್ಮೆ ಈಶ್ವರ, ಪಾರ್ವತಿ ಮತ್ತು ಕಾರ್ತಿಕೇಯ ಈ ಕ್ಷೇತ್ರಕ್ಕೆ ಬಂದಿದ್ದಾಗ, ತಂದೆ ಮತ್ತು ಮಗ 'ಹಸಿವು' ಎಂದರು. ಆಗ ಪಾರ್ವತಿ ಪಾಯಸ ತಯಾರಿಸಿದಳು. ಆ ಪಾಯಸ ಚೆಲ್ಲಿದಾಗ ಹಾಲಿನ ರೂಪದಲ್ಲಿ ಹರಿಯಲು ಶುರುವಾಯಿತು. ಕಾಲಾನಂತರ ಭೂಲೋಕದಲ್ಲಿ ಪಾಪಗಳು ಹೆಚ್ಚಾದಾಗ, ಭಗವಾನ್ ಪರಶುರಾಮರು ಈ ಕ್ಷೇತ್ರಕ್ಕೆ ಭೇಟಿ ಮಾಡಿ, ಹರಿಯುತ್ತಿರುವ ಹಾಲನ್ನು ನೀರನ್ನಾಗಿ ಬದಲಾಯಿಸಿದರು. ಈಗಲೂ ಈ ಸ್ಥಳದಲ್ಲಿ ಹರಿಯುವ ನೀರು ಬಿಳಿ ಬಣ್ಣದಲ್ಲಿ ಕಾಣುತ್ತದೆ. ಹಾಗಾಗಿ ಈ ಕ್ಷೇತ್ರಕ್ಕೆ 'ಖೀರ್ ಗಂಗಾ' ಎಂಬ ಹೆಸರು ಎಂದು ವಿವರಣೆ ನೀಡಿದರು.

ಕಠಿಣ ಹಾದಿಯ ಸೊಬಗನ್ನು ಸವಿಯುತ್ತಾ ನಮ್ಮ ಚಾರಣ ಸಾಗಿತು. ಸಂಜೆ ಮೈ ಕೊರೆಯುವ ಚಳಿ. ರಾತ್ರಿ 2 ಡಿಗ್ರಿಗೆ ಕುಸಿದ ಉಷ್ಣಾಂಶ. ಡೇರೆಯಲ್ಲಿ ರಾತ್ರಿ ಉಳಿದೆವು. ಬೆಳಗ್ಗೆ ಭಗವಾನ್ ಬೋಲೆನಾಥ್ ಮಂದಿರದತ್ತ ಪ್ರಯಾಣ. ಪಕ್ಕದಲ್ಲೇ ಖೀರ್ ಗಂಗಾ ದರ್ಶನ. ಬಿಸಿ ನೀರಿನ ಹರಿವು ಬಿಳಿ ಬಣ್ಣದ ರೂಪದಲ್ಲಿ ಕಾಣುತ್ತದೆ. ಯಾರೂ ಮುಟ್ಟಲು ಅನುಮತಿ ಇಲ್ಲ. ಆ ಮಂದಿರದ ಮೇಲಿನ ಪರ್ವತ ಕಾರ್ತಿಕೇಯ ತಪಸ್ಸು ಮಾಡಿದ ಸ್ಥಳವಂತೆ. ಮಂದಿರದ ಎದುರಿನ ಪರ್ವತಗಳು ಜುಂಗ್ರೂ ಮತ್ತು ಚುಂಗ್ರೂ ಎಂದು ಹೆಸರು.

ಚುಂಗ್ರೂ ಪರ್ವತದಲ್ಲಿ 'ಪಿನ್ ಪಾರ್ವತಿ' ಸ್ಥಳದಿಂದ ನದಿಯ ಹರಿವು ಕಾಣುತ್ತದೆ. ಈ ಜಾಗಕ್ಕೆ ಚಾರಣ ಮಾಡಲು 4ರಿಂದ 5 ದಿನಗಳು ಬೇಕಾಗಬಹುದು. ಪಿನ್ ಪಾರ್ವತಿ ಸ್ಥಳದಿಂದ 8ರಿಂದ 10 ಕಿ.ಮೀ. ಚಾರಣ ಮಾಡಿದರೆ ಮಾನ್–ತಲಾಯಿ ಸ್ಥಳ ತಲುಪಬಹುದು. ಅದು ಪಾರ್ವತಿಯ ಜನ್ಮಸ್ಥಳವಂತೆ. ಅಲ್ಲಿರುವ ಸ್ಪಿಟಿ ವ್ಯಾಲಿಯಲ್ಲಿ ಬೆಳೆಯುವ ಸೇಬಿನ ಹಣ್ಣಿನ ರುಚಿ ಹೆಚ್ಚು. ಪಾಂಡವರ ಸ್ವರ್ಗಾರೋಹಣ ಹಾದಿ ಕೇದಾರನಾಥದಿಂದ ಈ ಜಾಗದ ಮೂಲಕ ತಲುಪಿದ್ದಂತೆ.

ಕಾಡಿನಲ್ಲಿ ಸಿಗುವ ಹೂವುಗಳನ್ನು ಈಶ್ವರನಿಗೆ ಸಮರ್ಪಿಸಿ ಹಿಂತಿರುಗಲು ಚಾರಣ ಶುರುಮಾಡಿದೆವು. ಹಿಂತಿರುಗಲು ಹಳ್ಳಿಯ ಹಾದಿ ಆರಿಸಿಕೊಂಡೆವು. ಆ ಹಾದಿಯಲ್ಲಿ ರುದ್ರನಾಗ ಜಲಪಾತ ಕಾಣುತ್ತದೆ. ವಾಸುಕಿ ಹೆಡೆ ರೀತಿಯಲ್ಲಿದೆ ಆ ಜಲಪಾತ. ಒಮ್ಮೆ ಪಾರ್ವತಿ ಕಿವಿ ಓಲೆ ಜಾರಿ ಬಿತ್ತಂತೆ. ಅದನ್ನು ಹುಡುಕಲು ವಾಸುಕಿ ಬಂದ. ಈ ಜಾಗದ ಸೊಬಗಿಗೆ ಮನಸೋತು ಅಲ್ಲಿಯೇ ಉಳಿದನಂತೆ. ಅದಕ್ಕಾಗಿ ರುದ್ರನಾಗ ಎಂದು ಹೆಸರು ಬಂತು. ರುದ್ರನಾಗ ಜಲಪಾತದ ಪರಿಸರದಲ್ಲಿ ನಡೆಯುವ ವೀರಭದ್ರ ಮೇಳ ಬಹಳ ವಿಶೇಷ.

ಕಾಡಿನ ಹಾದಿಗೆ ಹೋಲಿಸಿದರೆ ಹಳ್ಳಿಯ ಹಾದಿ ಸುಲಭದ್ದು. ಒಟ್ಟು 25 ಕಿ.ಮೀ. ಚಾರಣದ ಹಾದಿ. ದೇಹ ಮತ್ತು ಮನಸ್ಸು ಗಟ್ಟಿಯಿದ್ದಾಗ ನೋಡಬೇಕಾದ ಸ್ಥಳ 'ಖೀರ್ ಗಂಗಾ'. ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಹೆಚ್ಚು ಪ್ರವಾಸಿಗರು ಅಲ್ಲಿಗೆ ಬರುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in